I/347306/2022

ಕರ್ನಾಟಕ ಸರ್ಕಾರ
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ : ತಾಂ.ಶಿ.ಇ 28 ಸಿಡಿಸಿ(1) 2022 (ಕ.ಸಂ:935209)

ಆಯುಕ್ತರ ಕಛೇರಿ ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ,
ಬೆಂಗಳೂರು-೫೬೦೦೦೧,
ದಿನಾಂಕ: 19/11/2022

## ಸುತ್ತೋಲೆ

ವಿಷಯ: ಸಿ-20 ಡಿಪ್ಲೊಮಾ ಪಠ್ಯಕ್ರಮದನ್ವಯ ವಿದ್ಯಾರ್ಥಿಗಳಿಗೆ ಕೈಗಾರಿಕೆಗಳು/ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿ ತರಬೇತಿ / ವೀಕ್ಷಣೆ ಸಲುವಾಗಿ ಅನುಮತಿ ನೀಡುವ ಬಗ್ಗೆ.

ಉಲ್ಲೇಖ: 2020-21 ನೇ ಸಾಲಿನಿಂದ ಅಳವಡಿಸಿರುವ ಸಿ-20 ಡಿಪ್ಲೊಮಾ ಪಠ್ಯಕ್ರಮಗಳು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸಿ-20 ಡಿಪ್ಲೊಮಾ ಪಠ್ಯಕ್ರಮದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಕೈಗಾರಿಕೆಗಳಿಗೆ ಭೇಟಿ ನೀಡಿ, ತರಬೇತಿ ಪಡೆಯುವುದು ಅವಶ್ಯವಾಗಿರುತ್ತದೆ. ಈ ಹಿನ್ನಲೆಯಲ್ಲಿ ಉಪನ್ಯಾಸಕರು ತಾವು ಬೋಧಿಸುತ್ತಿರುವ ವಿಷಯಕ್ಕೆ ಸಂಬಂಧಪಟ್ಟ ಕೈಗಾರಿಕೆಗಳಿಂದ ಅನುಮತಿಯನ್ನು ಪಡೆದು, ಕೈಗಾರಿಕಾ ತರಬೇತಿ / ವೀಕ್ಷಣೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳ ಪಟ್ಟಿ ಹಾಗೂ ತರಬೇತಿ/ವಿಕ್ಷಣೆಯ ಅವಧಿಯನ್ನು ಸಂಸ್ಥೆಯ ಪ್ರಾಚಾರ್ಯರಿಗೆ ಸಲ್ಲಿಸಿ ಅನುಮತಿಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ.

ಮುಂದುವರೆದು, ಕೈಗಾರಿಕೆಗಳು/ಕೈಗಾರಿಕಾ ತರಬೇತಿ ಸಂಸ್ಥೆಯು ಪಾಲಿಟೆಕ್ನಿಕ್ ಸಂಸ್ಥೆಯಿಂದ ಸುಮಾರು 60 ಕಿ.ಮೀ ಒಳಗಿನ ವ್ಯಾಪ್ತಿಯಲ್ಲಿದ್ದರೆ, ಸಂಸ್ಥೆಯ ಪ್ರಾಚಾರ್ಯರು ಸೂಕ್ತ ಸುರಕ್ಷತಾ ಕ್ರಮಗಳನ್ನು ಅನುಸರಿಸಿ ವಿದ್ಯಾರ್ಥಿಗಳನ್ನು ಸಂಬಂಧಿಸಿದ ಉಪನ್ಯಾಸಕರ ಜೊತೆ ಕೈಗಾರಿಕಾ ತರಬೇತಿ / ವೀಕ್ಷಣೆಗೆ ತಮ್ಮ ಹಂತದಲ್ಲಿಯೇ ಅನುಮತಿಯನ್ನು ನೀಡಬಹುದಾಗಿದೆ ಹಾಗೂ ಅನುಮತಿ ನೀಡಿರುವ ಬಗ್ಗೆ ಮಾಹಿತಿಯನ್ನು ಆಯುಕ್ತಾಲಯಕ್ಕೆ ಸಲ್ಲಿಸಲು ಸೂಚಿಸಿದೆ. ಒಂದು ವೇಳೆ ಕೈಗಾರಿಕೆ ಸಂಸ್ಥೆ /ಕೈಗಾರಿಕಾ ತರಬೇತಿ ಸಂಸ್ಥೆಯು ತಮ್ಮ ಸಂಸ್ಥೆಯಿಂದ 60 ಕಿ.ಮೀ ವ್ಯಾಪ್ತಿಯನ್ನು ಮೀರಿದ್ದರೆ, ಆಯುಕ್ತಾಲಯದಿಂದ ಪೂರ್ವಾನುಮತಿಯನ್ನು ಪಡೆದು ವಿದ್ಯಾರ್ಥಿಗಳ ಕೈಗಾರಿಕಾ ತರಬೇತಿ / ವೀಕ್ಷಣೆಯನ್ನು ಆಯೋಜಿಸಬಹುದಾಗಿದೆ.

ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಿದೆ.

ಜಂಟಿ ನಿರ್ದೇಶಕರು-ಸಿಡಿಸಿ

ಗೆ: ರಾಜ್ಯದ ಎಲ್ಲಾ ಪಾಲಿಟೆಕ್ನಿಕ್ ಸಂಸ್ಥೆಗಳ ಪ್ರಾಚಾರ್ಯರುಗಳಿಗೆ- ಸೂಕ್ತ ಕ್ರಮಕ್ಕಾಗಿ.

ಪ್ರತಿ:
1. ಮಾನ್ಯ ಆಯುಕ್ತರ ಆಪ್ತ ಶಾಖೆ- ಮಾಹಿತಿಗಾಗಿ.
2. ಮಾನ್ಯ ನಿರ್ದೇಶಕರ ಆಪ್ತ ಶಾಖೆ- ಮಾಹಿತಿಗಾಗಿ.
3. ಇ-ಆಡಳಿತ ವಿಭಾಗ- ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲು.

Scanned by TapScanner